ಅ) ಕೊಣಜಿ ಕ್ಷೇತ್ರದ ಒಂದು ಬದಿಯಲ್ಲಿದ್ದು ಮಂಗಳೂರು ವಿಶ್ವವಿದ್ಯಾಲಯ ಕೂಡ ಅಲ್ಲಿರುವುದರಿಂದ ಈ ಪೋಲೀಸ್ ಸ್ಟೇಷನ್ ಅಗತ್ಯವಾಗಿದ್ದು ಜನನಿಬಿಡವಿರುವುದರಿಂದ ಬೇಗನೆ ನಿರ್ಮಾಣಕಾರ್ಯವನ್ನು ಸರ್ಕಾರ ಕೈಗೊಳ್ಳುವುದೇ?

ಇ) ತಕ್ಷೀರು ಮೊಕದ್ದಮೆಗಳ ದೃಷ್ಟಿಯಿಂದ ಕೊಣಾಜಿಯ ಪೋಲಿಸ್ ಸ್ಟೇಷನ್‌ನ ಅಗತ್ಯವನ್ನು ಪೂರೈಸಿಕೊಡಲಾಗುವುದೇ?

ಶ್ರೀ.ಬಿ.ರಮಾನಾಥ್‌ರೈ(ರಾಜ್ಯ ಗೃಹಸಚಿವರು):-

ಅ) 1993-94ನೇ ಸಾಲಿಗಾಗಿ ಕೊಣಾಜಿಯಲ್ಲಿ ಪೋಲೀಸ್ ಠಾಣೆಯನ್ನು ಮಂಜೂರು ಮಾಡಲಾಗಿದೆ.

ಆ) ಸೂಕ್ತ ಜಮೀನನ್ನು ಪಡೆದು ಮುಂದಿನ ಕ್ರಮ ತೆಗೆದು ಕೊಳ್ಳಲಾಗುವುದು.

ಇ) (ಅ)ನಲ್ಲಿ ಉತ್ತರಿಸಿರುವುದರಿಂದ ಉದ್ಭವಿಸುವುದಿಲ್ಲ.

ರಾಯಚೂರು ಜಿಲ್ಲೆಯಲ್ಲಿರುವ ಪೋಲೀಸ್ ಠಾಣೆಗಳ ಸಂಖ್ಯೆ.

945(375) ಶ್ರೀ ಬಿ.ಹಂಪನಗೌಡ(ಸಿಂಧನೂರು):- ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಯಚೂರು ಜಿಲ್ಲೆಯಲ್ಲಿ ಎಷ್ಟು ಪೋಲೀಸ್ ಠಾಣೆಗಳಿವೆ?

ಆ) ಜಿಲ್ಲೆಯ ಜನಸಂಖ್ಯೆಗೆ ಅನುಗುಣವಾಗಿ ಬೇಕಾಗಿರುವ ಪೋಲೀಸ್ ಠಾಣೆಗಳೆಷ್ಟು?

ಇ) ಪೋಲಿಸ್ ಠಾಣೆಗಳನ್ನು ಸರ್ಕಾರ ಯಾವಾಗ ಮಂಜೂರು ಮಾಡುವುದು?

ಶ್ರೀ ಎಂ.ವೀರಪ್ಪಮೊಯಿಲಿ(ಮುಖ್ಯಮಂತ್ರಿಗಳು):-

ಅ) 35 ಪೋಲೀಸ್ ಠಾಣೆಗಳಿವೆ.

ಆ) ಜನಸಂಖ್ಯೆಯಂತೆ ಇನ್ನೂ 3 ಪೋಲಿಸ್ ಠಾಣೆಗಳು ಬೇಕಾಗುತ್ತದೆ.

ಇ) ಮುಂಬರುವ ವರ್ಷಗಳಲ್ಲಿ ಆಧ್ಯತೆ, ಅಗತ್ಯತೆ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಪೋಲಿಸ್ ಠಾಣೆಗಳನ್ನು ಮಂಜೂರು ಮಾಡಲು ಪರಿಶೀಲಿಸಲಾಗುವುದು.

ಬಿಳಿಗಿರಿ ರಂಗನ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು.

947(266) ಶ್ರೀ ಗುರುಪಾದಪ್ಪ ನಾಗ್ಮಾರಪ್ಪಳ್ಳಿ (ಔರದ್):- ಮಾನ್ಯ ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?